ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.
ಸಿ.ಸಿ.85/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾಃ ಎನ್.ಸಕಾರಾಮ್ ಶೆಟ್ಟಿ | ಪಿ.ಡಬ್ಲ್ಯೂ.1 |
| ತಂದೆಯ ಹೆಸರು | : | ಶಂಕರ್ ಶೆಟ್ಟಿ | ಸಿ.ಡಬ್ಲ್ಯೂ.5 |
| ವಯಸ್ಸು | : | 58 ವರ್ಷ | |
| ವೃತ್ತಿ | : | ಹಿರಿಯ ತಜ್ಞರು, ಎಂ.ಜಿ. ಆಸ್ಪತ್ರೆ, ಚಿಕ್ಕಮಗಳೂರು | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 05-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-

ನಾನು 2017 ರಿಂದ ಇಲ್ಲಿಯವರೆಗೆ ಚಿಕ್ಕಮಗಳೂರಿನ ಎಂ.ಜಿ. ಆಸ್ಪತ್ರೆಯಲ್ಲಿ ವೈಧ್ಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ10.05.2020 ರಂದು ಹಳಲು ಪಾಳ್ಯದಲ್ಲಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮಧ್ಯಾಹ್ನಃ03.30 ಗಂಟೆ ಸಮಯದಲ್ಲಿ ಚಾಸಾ-1 ರವರು ಆಸ್ಪತ್ರೆಗೆ ಹಾಜರಾಗಿ ತನ್ನ ಬಳಿ ಇಬ್ಬರು ಆಸಾಮಿಗಳು ಬೈಕ್ ಅನ್ನ ಅಡವಿಟ್ಟು ಹಣ ಪಡೆದು ಬೈಕ್ ಅನ್ನ ಕೊಡದೇ ತೆಗೆದುಕೊಂಡು ಹೋಗುತ್ತಿದ್ದಾಗ ಆತ ಅದನ್ನ ಪಡೆಯುವ ಉದ್ದೇಶದಿಂದ ಬೈಕ್ ಅನ್ನ ಹಿಂದೆ ಹಿಡಿದುಕೊಂಡಿದ್ದಾಗ ಬೈಕ್ ಅನ್ನ ಚಾಲನೆ ಮಾಡಿ ಗಾಯಪಡಿಸಿದ್ದಲ್ಲದೇ ಆತನಿಗೆ ಹಲ್ಲೆ ಮಾಡಿ ಗಾಯಪಡಿಸಿದ್ದಾಗಿ ತಿಳಿಸಿ ಆ

ಹಿನ್ನಲೆಯಲ್ಲಿ ಗಾಯಗೊಂಡು ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದರು. ಅವರನ್ನ ತಪಾಸಣೆಗೆ ಒಳಪಡಿಸಿದಾಗ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತದೆ.

1. ಬಲ ತೊಡೆಯ ಹಿಂಭಾಗದಲ್ಲಿ 15 x 10 x ¾ ಸೆಂ.ಮೀ. ಅಳತೆಯ ಹರಿದ ಮತ್ತು ಸುಟ್ಟ ಗಾಯ.

2. ಎಡಕಣ್ಣಿನ ರೆಪ್ಪೆಯ ಮೇಲೆ ¾ x ½ x ½ ಸೆಂ.ಮೀ ಅಳತೆಯ ಹರಿದ ಗಾಯ.

3. ಎಡಕನ್ನೆಯ ಮೇಲೆ 2 x 1 x ½ ಸೆಂ.ಮೀ ಅಳತೆಯ ರಕ್ತ ಹೆಪ್ಪುಗಟ್ಟಿದ ಗಾಯ.

4. ಮೂಗಿನ ಮೇಲೆ ¾ x ½ x ½ ಸೆಂ.ಮೀ ಅಳತೆಯ ತರಚಿದ ಗಾಯ.

5. ಗಾಯಗಳುವನ್ನ ಸಿಟಿ ಸ್ಕ್ಯಾನ್ ಗೆ ಅಳವಡಿಸಿದಾಗ ತಲೆ ಬುರುಡೆಯ ಒಳಭಾಗದಲ್ಲಿ ಮೆದುಳಿನ ಹೊರಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ ಗಾಯ ಆಗಿತ್ತು (Left Temporal region).

6. ತಲೆ ಬುರುಡೆಯ ಎಡಭಾಗದಲ್ಲಿ Left temporal parietal bone ಮುರಿತ ಆಗಿತ್ತು.

7. ಎಡ ಕೆನ್ನೆಯ ಮೇಲ್ಭಾಗದಲ್ಲಿ ಇರುವ ಮುಂಭಾಗದ Maxillary bone ಮುರಿತ ಆಗಿತ್ತು.

8. Maxillary Sinus and Ethmoid ಗಳಲ್ಲಿ ರಕ್ತ ತುಂಬಿಕೊಂಡಿತ್ತು.

ಸದರಿ ಗಾಯಾಳುವಿಗೆ ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಮಾಡಿ ದಾಖಲು ಮಾಡಿಕೊಂಡು ಹೆಚ್ಚಿನ ಚಿಕಿತ್ಸೆಗೆ ಸೂಕ್ತ ತಜ್ಞರಿಗೆ ಮಾಹಿತಿ ನೀಡಿರುತ್ತೇನೆ. ದಿ:21.05.2021 ರಂದು ಗಾಯಾಳುವಿನ ಗಾಯದ ಪ್ರಮಾಣ

ಪತ್ರವನ್ನ ಪೊಲೀಸರಿಗೆ ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನ ನೀಡಿದ ಕಾಲಕ್ಕೆ ಕೇಸ್ ಶೀಟ್, ಎಂ.ಎಲ್.ಸಿ ವಹಿ, ಡಿಸ್ ಚಾರ್ಜ್ ಸಮ್ಮರಿ, ಸಿಟಿ ಸ್ಕ್ಯಾನ್ ವರದಿ ಇತ್ಯಾದಿಗಳನ್ನ ಪರಿಶೀಲಿಸಿ ಗಾಯದ ಪ್ರಮಾಣ ಪತ್ರವನ್ನ ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಸ್ವರೂಪವನ್ನ ನಮೂದಿಸಿದ್ದು ಅದರ ಪ್ರಕಾರ ಕ್ರಮಸಂಖ್ಯೆ:1, 2 ಮತ್ತು 4 ರ ಗಾಯಗಳು ಸಾಮಾನ್ಯ ಸ್ವರೂಪದ್ದವು ಎಂದು ಹಾಗೂ ಉಳಿದ ಗಾಯಗಳು ಸಿಟಿ ಸ್ಕ್ಯಾನ್ ವರದಿ ಪ್ರಕಾರ ಮತ್ತು ತಜ್ಞ ವೈದ್ಯರ ಅಭಿಪ್ರಾಯದಲ್ಲಿ ತೀವ್ರ ಸ್ವರೂಪದ ಗಾಯಗಳು ಎಂದು ನಮೂದಿಸಿದ್ದೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲೀಸರು ಗಾಯದ ಪ್ರಮಾಣ ಪತ್ರವನ್ನ ನೀಡುವಂತೆ ನನಗೆ ಮನವಿಯನ್ನ ಕೊಟ್ಟಿದ್ದು ಅದರ ಮೇಲೆ ಇರುವ ಕಛೇರಿ ಮೊಹರನ್ನ ನೋಡಿ ಗುರುತಿಸಿದ್ದೇನೆ. ಅದನ್ನು ನಿಪಿ-2 ಎಂದು ಮತ್ತು ಕಛೇರಿ ಮೊಹರನ್ನ ನಿಪಿ-2(ಎ) ಎಂದು ಗುರುತಿಸಲಾಯಿತು. ಗಾಯಾಳು ಆಸ್ಪತ್ರೆಗೆ ದಾಖಲಾದ ನಂತರ ಪೊಲೀಸರಿಗೆ ಮೆಮೋ ಕೊಟ್ಟಿರುತ್ತೇನೆ. ಅದನ್ನ ನಿಪಿ-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈ ದಿನ ಕೇಸ್ ಶೀಟ್ ಅನ್ನ ಹಾಜರು ಮಾಡಿದ್ದು ಅದನ್ನ ನೋಡಿ ಗುರುತಿಸಿದ್ದೇನೆ. ಅದನ್ನ ನಿಪಿ-4 ಎಂದು ಗುರುತಿಸಲಾಯಿತು. ಗಾಯಾಳುವಿಗೆ ಆಗಿದ್ದ ಗಾಯಗಳನ್ನ ಫೋಟೋದಲ್ಲಿ ನೋಡಿ ಗುರುತಿಸಿದ್ದೇನೆ. ಸಾಕ್ಷಿಗೆ 4 ಫೋಟೋಗಳನ್ನ ತೋರಿಸಲಾಗಿ ಅವುಗಳನ್ನ ನೋಡಿ ಗುರುತಿಸಿದ್ದಾರೆ. ಅವುಗಳನ್ನ ನಿಪಿ-5 ರಿಂದ

ನಿಪಿ-8 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯನ್ನ ಬೈಕ್ ಹಿಡಿದುಕೊಂಡಾಗ ಬೈಕ್ ಚಾಲನೆ ಮಾಡಿ ಎಳೆದರೆ ಮತ್ತು ಹಲ್ಲೆ ಮಾಡಿದರೆ ನಿಪಿ-1 ರಲ್ಲಿ ನಮೂದು ಮಾಡಿರುವ ಗಾಯ ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ ಯು.ಹೆಚ್.ಎಂ. ವಕೀಲರಿಂದಃ-</u>

ಸಾಮಾನ್ಯವಾಗಿ ಬೈಕ್ ಚಾಲಕ ವೇಗವಾಗಿ ಹೋಗುವಾಗ ಬಿದ್ದರೆ ನಿಪಿ-1 ರಲ್ಲಿ ನಮೂದು ಮಾಡಿರುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಇದ್ದಕ್ಕಿದ್ದಂತೆ ಟಾರ್ ರಸ್ತೆ ಮೇಲೆ ಬೈಕ್ ಚಾಲಕ ಬಿದ್ದರೆ ಆ ರೀತಿ ಗಾಯಗಳು ಆಗುವ ಸಾಧ್ಯತೆ ಇದೆ ಎನ್ನುತ್ತಾರೆ. ಚಾಸಾ-1 ರವರು ಇಂತಹ ವ್ಯಕ್ತಿಗಳಿಂದ ತನಗೆ ಗಾಯ ಆಗಿದೆ ಎಂದು ಹೇಳಿಲ್ಲ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ಆ ವಿಚಾರ ಹೇಳಿಲ್ಲ ಆದರೆ ತನ್ನಲ್ಲಿ ಬೈಕ್ ಅಡವಿಟ್ಟು ಅದನ್ನ ಅಕ್ರಮವಾಗಿ ತೆಗೆದುಕೊಂಡು ಹೋಗುತ್ತಿದ್ದಾಗ ಈ ರೀತಿ ಗಾಯ ಆಗಿದೆ ಎಂದು ಹೇಳಿದರು ಎನ್ನುತ್ತಾರೆ. ನಾನು ಗಾಯಾಳುವಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ನಿಪಿ-1 ರಲ್ಲಿ ನಮೂದಿಸಿರುವ ಗಾಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನ ಕೊಡುವ ಪೂರ್ವದಲ್ಲಿ ಗಾಯಾಳುವನ್ನ ಹೆಚ್ಚುವರಿ ಚಿಕಿತ್ಸೆ ಮಾಡಿದ ವೈಧ್ಯರ ಅಭಿಪ್ರಾಯವನ್ನ ಲಿಖಿತವಾಗಿ ನಾನು ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸಿಟಿ ಸ್ಕ್ಯಾನ್ ವರದಿಯನ್ನ ಹಾಜರು ಮಾಡಿಲ್ಲ ಎಂದರೆ ಸರಿ.

C.C.No.85/2022
PW-1 CW-5

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್‌ಃ